Website: www.bwssb.gov.in
Email: caos@bwssb.gov.in

Fax : 080-22945102
Phone : 080-22945386

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

**BANGALORE WATER SUPPLY & SEWERAGE BOARD**

1st Floor, Cauvery Bhavan, K.G.Road, Bangalore-560009.

No : BWSSB/CHAPM/02-2019/EST32/ 1171 /2021-22 Dated: 28.07.2021.

## ಪ್ರಕಟಣೆ

ವಿಷಯ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಾಗಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿರುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಬಗ್ಗೆ.

ಉಲ್ಲೇಖ: ಅಧಿಸೂಚನೆ ಸಂಖ್ಯೆ: BWSSB/CHAD/EST-14/59/2015/1050/2021-22 Dated: 17.07.2021.

---**---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಾಗಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿರುವುದಾಗಿ YouTube ಹಾಗೂ ಇನ್ನಿತರೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ.

ಉಲ್ಲೇಖದಲ್ಲಿ ಪ್ರಸ್ತಾಪಿಸಿರುವ ಅಧಿಸೂಚನೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತನ್ನ ವೃಂದ, ನೇಮಕಾತಿ ಮತ್ತು ಬಡ್ತಿ ನಿಬಂಧನೆಗಳಿಗೆ ಸಮಗ್ರ ತಿದ್ದುಪಡಿ ಮಾಡಿ ಕರಡು ನಿಬಂಧನೆಗಳನ್ನು ಅಧಿಸೂಚಿಸಿ, ದಿನಾಂಕ: 20.07.2021ರ ರಾಜ್ಯಪತ್ರದಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ ಹೊರತು ಇದು **ನೇಮಕಾತಿ ಅಧಿಸೂಚನೆಯಾಗಿರುವುದಿಲ್ಲ.** ಈ ಸಂಬಂಧ **ಬೆಂಗಳೂರು ಜಲಮಂಡಳಿಯು ಯಾವುದೇ ನೇಮಕಾತಿ ಅರ್ಜಿಯನ್ನು ವಿತರಿಸುತ್ತಿರುವುದಿಲ್ಲ.**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೇಮಕಾತಿಗೆ ಸಂಬಂಧಿತ ಯಾವುದೇ ಪ್ರಕಟಣೆಯನ್ನು ತನ್ನ ಅಧಿಕೃತ ಅಂತರ್ಜಾಲ **www.bwssb.gov.in** ಹಾಗೂ ದೈನಂದಿನ ದಿನಪತ್ರಿಕೆಗಳಲ್ಲಿ ಪ್ರಕಟಿಸುತ್ತದೆಯೇ ಹೊರತು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸುವುದಿಲ್ಲ. **ನೇಮಕಾತಿ ಸಂಬಂಧ ಸಾರ್ವಜನಿಕರು/ಅಭ್ಯರ್ಥಿಗಳು ಯಾವುದೇ ವಂಚನೆಗೆ ಒಳಗಾಗದಂತೆ ಎಚ್ಚರದಿಂದ ಇರಲು ಈ ಮೂಲಕ ಕೋರಲಾಗಿದೆ.**

28/7

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ
ಬೆಂಗಳೂರು ಜಲಮಂಡಳಿ

28/7/21
28/7/2021

ಪ್ರತಿಯನ್ನು ಸಾರ್ವಜನಿಕ ಮಾಹಿತಿಗಾಗಿ ಸೂಚನಾ ಫಲಕದಲ್ಲಿ ಅಳವಡಿಸಲು ಸೂಚಿಸಿದೆ.

ಪ್ರತಿಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿ, ಬೆಂಗಳೂರು ಜಲಮಂಡಳಿ ರವರ ಗಮನಕ್ಕೆ ಹಾಗೂ ಮೇಲಿನ ಪ್ರಕಟಣೆಯ ಕುರಿತು ದೈನಂದಿನ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕೋರಿದೆ.